**ಪತ್ರಿಕಾ ಪ್ರಕಟಣೆ**

**ವಿಜಯಪುರ**

**ದಿನಾಂಕ: 15.06.2021.**

**1] ದೇವರ ಹಿಪ್ಪರಗಿ ಪೊಲೀಸ ಠಾಣೆ ಗುನ್ನೆ ನಂ: 99/2021 ಕಲಂ: 279, 304(ಎ) ಐ.ಪಿ.ಸಿ. & 187 ಐ.ಎಮ್.ವಿ. ಆ್ಯಕ್ಟ್.**

ದಿನಾಂಕ 14.06.2021 ರಂದು 17:30 ಗಂಟೆಗೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ 1] ಮೋಟಾರ್ ಸೈಕಲ್ ನಂಬರ ಕೆಎ:36ವಾಯ್-6589 ನೇದ್ದರ ಸವಾರ ಹೆಸರು & ವಿಳಾಸ ನಮೂದು ಇಲ್ಲಾ. ಈತನು ತಾನು ನಡೆಸುತ್ತಿದ್ದ ಮೋಟಾರ್ ಸೈಕಲ್ ನೇದ್ದನ್ನು ದೇವರ ಹಿಪ್ಪರಗಿ-ಬಸವನ ಬಾಗೇವಾಡಿ ಸಾರ್ವಜನಿಕ ರಸ್ತೆಯ ಮೇಲೆ ದೇವರ ಹಿಪ್ಪರಗಿ ಕಡೆಯಿಂದ ಬಸವನ ಬಾಗೇವಾಡಿ ಕಡೆಗೆ ಹೋಗಲು ತನ್ನ ಮೋಟಾರ್ ಸೈಕಲ್‌ನ್ನು ಅತೀ ಜೋರಾಗಿ ಮತ್ತು ನಿರ್ಲಕ್ಷ್ಯತನದಿಂದ ಅಡ್ಡಾದಿಡ್ಡಿಯಾಗಿ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಬಂದು ದೇವರ ಹಿಪ್ಪರಗಿಯ ಪೆಟ್ರೋಲ್ ಬಂಕ್ ಹತ್ತಿರ ಬಸವನ ಬಾಗೇವಾಡಿ ಕಡೆಯಿಂದ ದೇವರ ಹಿಪ್ಪರಗಿ ಕಡೆಗೆ ತನ್ನ ಸುಪರ ಎಕ್ಸ್.ಎಲ್. ಮೋಟಾರ್ ಸೈಕಲ್ ನಂಬರ ಕೆ.ಎ:28 ಇಡಬ್ಲ್ಯೂ-5917 ನೇದ್ದರ ಮೇಲೆ ತನ್ನ ಸೈಡಿನಲ್ಲಿ ನಿಧಾನವಾಗಿ ನಡೆಸುತ್ತಾ ಬರುತ್ತಿದ್ದ ಪಿರ್ಯಾದಿಯ ತಂದೆಯವರಾದ ಶಿವಪ್ಪ ತಂದೆ ಸಂಗಪ್ಪ ಹಡಪದ, ವಯಾ: 50 ವರ್ಷ, ಸಾ: ನಿವಾಳಖೇಡ, ತಾ: ದೇವರ ಹಿಪ್ಪರಗಿ ಇವರಿಗೆ ಎದುರಿನಿಂದ ಡಿಕ್ಕಿ ಹೊಡೆದು ಅಪಘಾತಪಡಿಸಿ ಅವರಿಗೆ ಭಾರಿ ಗಾಯ-ಪೆಟ್ಟುಪಡಿಸಿದ್ದು, ಅವರಿಗೆ ಉಪಚಾರಕ್ಕೆ ಕರೆದುಕೊಂಡು ಹೊದಾಗ ಸಿಂದಗಿಯ ಸರಕಾರಿ ಆಸ್ಪತ್ರೆಯ ಆವರಣದಲ್ಲಿ ಮೃತಪಟ್ಟಿದ್ದು ಇರುತ್ತದೆ. ಹಾಗೂ ಅಪಘಾತಪಡಿಸಿದ ಸದರ ಮೋಟಾರ್ ಸೈಕಲ್‌ದ ಸವಾರನು ತನ್ನ ಮೋಟಾರ್ ಸೈಕಲ್‌ನ್ನು ಘಟನಾ ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿದ್ದು ಸದರಿಯವನ ಮೇಲೆ ನನ್ನದು ಪಿರ್ಯಾದಿ ಇರುತ್ತದೆ ಅಂತಾ ವಗೈರೆ ಫಿರ್ಯಾದಿದಾರನ ಫಿರ್ಯಾದಿಯಲ್ಲಿ ನಮೂದು ಅದೆ. ಈ ಬಗ್ಗೆ ಸಂಗನಬಸು ಶಿವಪ್ಪ ಹಡಪದ, ಸಾ: ನಿವಾಳಖೇಡ, ತಾ: ದೇವರ ಹಿಪ್ಪರಗಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 14.06.2021 ರಂದು ದೇವರ ಹಿಪ್ಪರಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಆಲಮೇಲ ಪೊಲೀಸ ಠಾಣೆ ಗುನ್ನಾ. ನಂ: 68/2021 ಕಲಂ: 279, 304 [ಎ] ಐ.ಪಿ.ಸಿ & 187 ಎಮ್.ವ್ಹಿ.ಆ್ಯಕ್ಟ್**

ದಿನಾಂಕ 13.06.2021 ರಂದು 20.45 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ 01] ಇರ್ಫಾನ ತಂದೆ ಮೈಬೂಬ ಜಮಾದಾರ ಸಾ: ಬಳಗಾನೂರ. ಟ್ರ್ಯಾಕ್ಟರ ಇಂಜಿನ ಚಾಲಕ ನೋಂದಣಿ ಸಂಖ್ಯೆ ನಮೂದ ಇರುವದಿಲ್ಲ. ಈತನು ತಾನು ನಡೆಸುತ್ತಿದ್ದ ಟ್ರ್ಯಾಕ್ಟರ ಇಂಜಿನನ್ನು ಹಿಕ್ಕಣಗುತ್ತಿ ಕಡೆಯಿಂದ ಬಳಗಾನೂರ ಕಡೆಗೆ ಅತೀ ಜೋರಾಗಿ ಮತ್ತು ನಿರ್ಲಕ್ಷತನದಿಂದ ನಡೆಯಿಸಿಕೊಂಡು ಬಂದು ಬಳಗಾನೂರ ಕಡೆಯಿಂದ ಹಿಕ್ಕಣಗುತ್ತಿ ಕಡೆಗೆ ಹೊರಟಿದ್ದ ಪಿರ್ಯಾದಿಯ ಮಗ ಮೃತ:- ಯಲ್ಲಪ್ಪ ನಿಂಗಪ್ಪ ರೂಗಿ ವಯಾ 29 ವರ್ಷ, ಇತನ ಮೋಟರ್ ಸೈಕಲ್ ನಂ. ಎಮ್ಎಚ್-13 ಎಡಬ್ಲ್ಯೂ-6170 ನೇದ್ದಕ್ಕೆ ಹಾಯಿಸಿ ಅಫಘಾತ ಪಡಿಸಿದ್ದು, ಮೃತನ ಬಲಗಾಲಿಗೆ, ಬಲಗೈಗೆ, ತಲೆಗೆ ವಗೈರೆ ಕಡೆಗೆ ಭಾರಿಗಾಯಪೆಟ್ಟುಗಳು ಆಗಿದ್ದು, ಅವನಿಗೆ ಸಿಂದಗಿ ಧನ್ವಂತರಿ ಆಸ್ಪತ್ರೆಯಲ್ಲಿ ಉಪಚಾರ ಮಾಡಿಸಿಕೊಂಡು ಹೆಚ್ಚಿನ ಉಪಚಾರ ಕುರಿತು ಮಿರಜಕ್ಕೆ ತೆಗೆದುಕೊಂಡು ಹೋದಾಗ ಮೀರಜ ನಗರದಲ್ಲಿ ಹೋಗುವಷ್ಟರಲ್ಲಿ ಮೃತಪಟ್ಟಿರುತ್ತಾನೆ. ಅಫಘಾತ ಪಡಿಸಿದ ಟ್ರ್ಯಾಕ್ಟರ ಇಂಜಿನ ನಂಬರ ಗೊತ್ತಾಗಿರುವದಿಲ್ಲ ಕಾರಣ ಇರ್ಫಾನ ತಂದೆ ಮೈಬೂಬ ಜಮಾದಾರ ಸಾ: ಬಳಗಾನೂರ ಇತನ ಮೇಲೆ ನನ್ನದು ಪಿರ್ಯಾದಿ ಇರುತ್ತದೆ. ಅಂತಾ ವಗೈರೆ ಫಿರ್ಯಾದಿಯಲ್ಲಿ ನಮೂದು ಇರುತ್ತದೆ. ಈ ಬಗ್ಗೆ ನಿಂಗಪ್ಪ ಬರಮಣ್ಣ ರೂಗಿ ಸಾ: ಬಳಗಾನೂರ ತಾ: ಸಿಂದಗಿ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 14.06,2021 ರಂದು ಆಲಮೇಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಬ ಬಾಗೇವಾಡಿ ಪೊಲೀಸ ಠಾಣೆ ಗುನ್ನಾ. ನಂ: 99/2021 ಕಲಂ: 188, 269, 271 ಐಪಿಸಿ & 87 ಕೆ.ಪಿ ಆ್ಯಕ್ಟ**

ದಿನಾಂಕ 14.06.2021 ರಂದು 15;40 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ **1**] ] ಪ್ರವೀಣ ಮಲ್ಲಪ್ಪ ಚಲವಾದಿ ಸಾ: ಇವಣಗಿ 2] ಪವಾಡೆಪ್ಪ ಬಸಪ್ಪ ಚಲವಾದಿ ಸಾ: ಇವಣಗಿ 3] ಚಿದಾನಂದ ಬಸಪ್ಪ ಹೊಸಮನಿ ಸಾ: ಇವಣಗಿ 4] ಬಸವರಾಜ ಮಲ್ಲಪ್ಪ ಪಡಶೆಟ್ಟಿ ಸಾ: ಬ.ಬಾಗೇವಾಡಿ 5] ಸುರೇಶ ಯಲ್ಲಪ್ಪ ಚಲವಾದಿ ಸಾ: ಇವಣಗಿ 6] ಶಿವು ಶೇಖರ ಕುಂಬಾರ ಸಾ: ಇವಣಗಿ 7] ಈಶ್ವರ ಸತೀಶ ಜಾಧವ ಸಾ: ಇವಣಗಿ 8] ಪ್ರವೀಣ ಮರತುಜ ಚಲವಾದಿ ಸಾ; ಇವಣಗಿ 9] ರಾವುತಪ್ಪ ಕೆಂಚಪ್ಪ ಗುಳಾಪರ ಸಾ: ಇವಣಗಿ 10] ಮೈಬೂಬ ಹಸನಸಾಬ ಯಲಗಾರ ಸಾ; ಬ.ಬಾಗೇವಾಡಿ 11] ಗೌಡಪ್ಪ ಅಶೋಕ ರೂಡಗಿ ಸಾ: ಇವಣಗಿ 12] ಆಸೀಪ ಹಸನಸಾಬ ಸೌದಾಗರ ಸಾ: ಬ,ಬಾಗೇವಾಡಿ 13] ರಮೇಶ ಹಣಮಂತ ಸೂರ್ಯವಂಶಿ ಸಾ: ಬ.ಬಾಗೇವಾಡಿ ಇವರು ಇವಣಗಿ ಗ್ರಾಮದ ಹತ್ತರಿ ಇರುವ ಸರ್ಕಾರಿ ಕೆರೆಯಲ್ಲಿ ತಮ್ಮ ಪಾಯಿದೆಗೊಸ್ಕರ ಇಸ್ಪೇಟ ಎಲಿಗಳ ಸಹಾಯದಿಂದ ಮನ್ನಾ ಜೂಜಾಟ ಆಡುತ್ತಿದ್ದು, ಪ್ರಸ್ತುತ ಕರೋನಾ ಸಾಂಕ್ರಾಮಿಕ ರೋಗವು [ಕೋವಿಡ್-19] ವ್ಯಾಪಕವಾಗಿ ಹರಡುತ್ತಿದ್ದರಿಂದ ಮಾನ್ಯ ಕರ್ನಾಟಕ ಸರ್ಕಾರವು ಸಾರ್ವಜನಿಕ ಅತ್ಯವಶ್ಯಕ ಮಳಿಗೆಗಳನ್ನು ಹೊರತು ಪಡಿಸಿ ಎಲ್ಲಾ ವಸ್ತುಗಳ ಅಂಗಡಿಗಳು ತೆರೆಯಬಾರದು ಅಂತಾ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಚಟುವಟಿಕೆ ಕೈಕೊಳ್ಳದಂತೆ ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ, ಮಾಸ್ಕ ಧರಿಸುವಂತೆ ಕರ್ನಾಟಕ ಸರಕಾರದ ಆದೇಶವಿದ್ದರೂ ಸಹ ಅಪಾಯಕಾರಿ ಸಾಂಕ್ರಾಮೀಕ ರೋಗ ಹರಡುವಿಕೆ ಬಗ್ಗೆ ನಿರ್ಲಕ್ಷ ವಹಿಸಿ ಮಾನ್ಯ ಕರ್ನಾಟಕ ಸರಕಾರದ ಆದೇಶವನ್ನು ಉಲ್ಲಂಘನೆ ಮಾಡಿ ತಮ್ಮ ತಮ್ಮ ಪಾಯಿದೆಗೊಸ್ಕರ ಇಸ್ಪೇಟ ಎಲೆಗಳ ಸಹಾಯದಿಂದ ಅಂದರ

ಬಾಹರ ಅಂಬುವ ಮನ್ನಾ ಜೂಜಾಟ ಆಡುತ್ತಿದ್ದಾಗ ಸಿಕ್ಕಿದ್ದು ಅದೆ. ಜಪ್ತಾದ ಮಾಲು: 1] ಒಟ್ಟು ರೋಖ ಹಣ 9650=00 ರೂಪಾಯಿಗಳು. 2] 52 ಇಸ್ಪೇಟ ಎಲೆಗಳು ಕಿಮ್ಮತ್ತು 00=00. ಸಿಕ್ಕಿದ್ದು ಇರುತ್ತದೆ. ಈ ಬಗ್ಗೆ ಸ:ತ: ಬಸವರಾಜ. ಎಮ್. ಪಾಟೀಲ ಪಿ.ಐ. ಬಸವನ ಬಾಗೇವಾಡಿ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 14.06,2021 ರಂದು ಬ ಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.